I have given the notice this morning. I may be permitted to raise it tomorrow.

MR. SPEAKER.—Give in some time to look into the notice. Next item, Calling Attention, Sri Ramegowda and others.....

CALLING ATTENTION TO MATTERS OF URGENT PUBLIC IMPORTANCE

re :—Charying of fees for administering vaccine to the cattle in the State.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಪಶುಗಳಿಗೆ ಬರತಕ್ಕ ಕಾಲು ಜ್ವರ ಮತ್ತು ಬಾಯಿ ಜ್ವರಕ್ಕೆ ಸಂಬಂಧಪಟ್ಟಂತೆ ಹಾಕತಕ್ಕಂಥ ಚುಚ್ಚು ಮದ್ದುಗಳಿಗೆ ೪ ರೂಪಾಯಿ ಪಶೂಲು ಮಾಡಿರುವ ಬಗ್ಗೆ ಮಾನ್ಯ ಪಶುಸಂಗೋಪನಾ ಮತ್ತು ಸಂಸದೀಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೈ. ರಾಮಕೃಷ್ಣ (ಪಶುಸಂಗೋಪನಾ ಮತ್ತು ಕಾನೂನು ಮಂತ್ರಿಯವರು).—೧೯೭೨–೭೩ ರಿಂದ ಈವರೆವಿಗೆ ಕಾಲು ಬಾಯಿ ಜ್ವರದ ಚುಚ್ಚು ಮದ್ದಿನ ಬೆಲೆಯಲ್ಲಿ ಶೇಕಡ ೫೦ರಷ್ಟು ರಿಯಾಯಿತಿ ಬೆಲೆಯನ್ನು ರೈತರಿಂದ ವಸೂಲಿ ಮಾಡಲಾಗುತ್ತಿದೆ. ಭಾರತ ಸರ್ಕಾರ ಶೇಕಡ ೨೫ರಷ್ಟು ಹಾಗೂ ರಾಜ್ಯ ಸರ್ಕಾರ ಶೇಕಡ ೨೫ರಷ್ಟು ಏರ್ಪಡನ್ನು ವಹಿಸಿಕೊಳ್ಳುತ್ತಿದೆ. ಇತ್ತೀಚೆಗೆ ಈ ಲಸಿಕೆಯ ಬೆಲೆ ೬ ರೂ. ಗಳು ಆಗಿದ್ದು ಗೋಪಾಲಕರು ೩ ರೂ. ಮಾತ್ರ ತೆರಬೇಕಾಗುತ್ತದೆ. ಪ್ರಸ್ತುತ ಬೆಲೆ ಇನ್ನೂ ೫–೨೦ ಪೈಸೆಗೆ ಇಳಿದಿದೆ. ಆದುದರಿಂದ ಗೋಪಾಲಕರು ೨–೬೦ ಪೈಸೆ ಮಾತ್ರ ತೆರಬೇಕಾಗುತ್ತದೆ. ಈ ಪದ್ಧತಿಯು ಭಾರತ ಸರ್ಕಾರದ ಆದೇಶದಂತೆ ಜಾರಿಯಲ್ಲಿದೆ. ಮುಂಜಾಗ್ರತಾ ಕ್ರಮವಾಗಿ ಈ ಲಸಿಕೆಯನ್ನು ಕೊಡಲು ಭಾರತ ಸರ್ಕಾರದೊಡನೆ ಸಮಾಲೋಚನೆ ಮಾಡಲಾಗುತ್ತಿದೆ.

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಎರಡು ರೂಪಾಯಿ ಇರವತ್ತು ಪೈಸೆ ಇದುವರೆಗೆ ಜಾರಿಗೆ ಬಂದಿರುವುದು ನನಗೆ ಕಂಡುಬಂದಿಲ್ಲ. ನನ್ನ ಹತ್ತಿರ ೪ ರೂಪಾಯಿ ತೆಗೆದುಕೊಂಡಿರುವುದಕ್ಕೆ ರಶೀತಿ ಕೊಟ್ಟಿದ್ದಾರೆ. ನನಗೆ ಚಿನ್ನಪ್ಪ ಶಕ್ತಿ ಕಡಿವೆ ಇದ್ದು ಮರೆತು ಬಂದಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ನನಗೆ ಮೋಸ ಮಾಡಿ ತೆಗೆದುಕೊಂಡಿರಬೇಕು ಅಥವಾ ಹೇಳುವುದರಲ್ಲಿ ದೋಷ ಇರಬೇಕು. ಅಲ್ಲದೆ, ಮಾನ್ಯ ಮಂತ್ರಿಯವರು ಕಳೆದ ಶಾಸನ ಸಭೆಯಲ್ಲಿ ಈ ಲಸಿಕೆಯನ್ನು ಪುಗ್‌ಸಟ್ಟೆ ಕೊಡುತ್ತೇವೆಂದು ಹೇಳಿದ್ದರು. ಅದು ನನಗೆ ಪರಮಾನಂದವಾಗಿತ್ತು. ನನಗೆ ಅಂತಹ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಅದು ಕೂಡ ೧೫ ದಿನಸಗಳವರೆಗೆ ಮಾತ್ರ ಕೊಟ್ಟಿದ್ದಾರೆ. ಹಳೇ ಸ್ಟಾಕ್ ಲಸಿಕೆಯನ್ನು ಕೊಟ್ಟರು. ಇದರಿಂದ ಮುಕ್ಕಾಲು ಭಾಗದ ಜಾನುವಾರುಗಳು ಸತ್ತುಹೋದವು. ಇವರು ಪರವಾಗಿ ಕೊಟ್ಟಿದ್ದು, ನಮಗೆ ಶಾಪವಾಗಿ ಪರಿಣಮಿಸಿತು. ಲಸಿಕೆ ಹಾಕಿಸಿದ ೮–೧೦ ದಿವಸಗಳಲ್ಲಿ ಜಾನುವಾರುಗಳು ಸತ್ತುಹೋದವು ಗರ್ಭ ಕೂಡ ನಿಂತುಹೋಯಿತು. ಮಾನ್ಯ ಮಂತ್ರಿಯವರು ಏತಕ್ಕೆ ಸತ್ಯಕ್ಕೆ ದೂರವಾದುದನ್ನು ಹೇಳಿದರು? ಮಾನ್ಯ ಮಂತ್ರಿಯವರು ಪಶುಪಾಲಕರ ಮೇಲೆ ಕರುಣೆಯಿಟ್ಟು ಅದನ್ನು ಪುಗ್‌ಸಟ್ಟೆ ಕೊಡುವಂತೆ ವ್ಯವಸ್ಥೆ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ೨ ರೂ. ೬೦ ಪೈಸೆ ಏತಕ್ಕೆ ಪಶೂಲು ಮಾಡುತ್ತಾರೆಂಬುದನ್ನು ವಿವರವಾಗಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಕಳೆದ ವರ್ಷ ಪರಿಸ್ಥಿತಿ ಬಹಳ ಹದಗೆಟ್ಟಿದ್ದರಿಂದ ಮುಖ್ಯತಾಗಿ ಮಾಡಲಾಯಿತು. ಈ ವರ್ಷ ಮಳೆ ಚೆನ್ನಾಗಿ ಬಂದಿದ್ದು ಅಂತಹ ಒಂದು ಪರಿಸ್ಥಿತಿ ಇಲ್ಲ. ಅಂತಹ ಒಂದು ಪರಿಸ್ಥಿತಿ ಮತ್ತೆ ಬಂದರೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿ, ಲಸಿಕೆ ತರಿಸಿದ್ದೇವೆ. ಇಲ್ಲಿ ೪ ಮತ್ತು ಎರಡು ರೂಪಾಯಿಗಳ ಪ್ರಶ್ನೆ ಮುಖ್ಯವಲ್ಲ. ಈಗ ಔಷಧಿ ಬೆಲೆ ಕಡಿಮೆಯಾಗಿರುವುದರಿಂದ ಕಾಲು ಭಾಗ ಚಾರ್ಜು ಮಾಡಿದ್ದೇವೆ.

ಶ್ರೀ ಪಿ. ರಾಂದೇವ್.—ಕಳೆದ ವರ್ಷದ ಹೇಳಿಕೆಗೂ ಈ ವರ್ಷದ ಹೇಳಿಕೆಗೂ ಮಾರ್ಪಾಡಾಗಿದೆ. ಕಳೆದ ವರ್ಷ ಮುಫ್ತಾಗಿ ಕೊಡುತ್ತೇವೆಂದು ಹೇಳಿದ ಮೇಲೆ ನೀವು ಮತ್ತೆ ಎತಕ್ಕೆ ಅದನ್ನು ಬದಲಾವಣೆ ಮಾಡಿತ್ತೀರಿ? ಅದರಲ್ಲಿ ಟರ್ಮ್ಸ್ ಆಂಡ್ ಕಂಡೀಷನ್ಸ್ ಏನೂ ಇಲ್ಲ. ನೀವು ಜನಗಳ ಬಗ್ಗೆಯೂ ಅಷ್ಟೇ ದನಗಳ ಬಗ್ಗೆಯೂ ಅಷ್ಟೆ, ನನ್ನ ಹತ್ತಿರ ಒಂದು ಸ್ಯಾಂಪಲ್ ಇತ್ತು ತಂದಿಲ್ಲ ಅದು ಕಲರ್ ವಾಟರ್ ಇದ್ದ ಹಾಗೆ ಇದೆ. ವ್ಯಾಪಾರಸ್ಥರು ವೋಸ ಮಾಡುತ್ತಾರೆ. ಬೆರಕೆ ಔಷದಿ ಕೊಡುತ್ತಾರೆಂದು ನಾವು ತಮಗೆ ಪತ್ರ ಕೂಡ ಬರೆದಿದ್ದೇವೆ. ಗರ್ಭಧಾರಣೆಗೆ ಸಂಧಂದಪಟ್ಟಂತಹ ಲಸಿಕೆ ಹಾಗಸಿದರೆ ಗರ್ಭ ಬರುವುದಿಲ್ಲ. ಪೈಪ್‌ಲೈನ್‌ನಲ್ಲಿ ಬಾಯಿ ಜ್ವರಕ್ಕೆ ಸಂಬಂಧಪಟ್ಟ ಲಸಿಕೆಯನ್ನು ಹಾಕಿದ ಮೇಲೆ ನೂರಾರು ಹಸುಗಳು ಸತ್ತುಹೋದವು. ಮೂಕ ಪ್ರಾಣಿಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ. ಟಿ. ಮಾಯಣ್ಣ.—ಮಾನ್ಯ ಅಧ್ಯಕ್ಷರೇ, ಈ ಖಾಯಿಲೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡುವುದರಿಂದ ಜಾಸ್ತಿಯಾಗುತ್ತಿದೆ. ಇದರಿಂದಾಗಿ ರೈತರು ಎತ್ತುಗಳ ತೊಂದರೆಯಿಂದ ವ್ಯವಸಾಯ ಮಾಡಲಿಕ್ಕೆ ಬಹಳ ಕಷ್ಟವಾಗುತ್ತಿದೆ. ಇವೊತ್ತು ಸರ್ಕಾರದವರು ಯಾವುದೋ ಒಂದು ತತ್ವಕ್ಕೆ ಕಟ್ಟುಬಿದ್ದು ಕೇಂದ್ರ ಸರ್ಕಾರದವರು ಆ ರೀತಿ ಹೇಳಿದ್ದಾರೆ. ಅದಕ್ಕೋಸ್ಕರ ಆ ರೀತಿ ಮಾಡಿದ್ದೇವೆಂದು ಕೇಂದ್ರ ಸರ್ಕಾರದ ಕಡೆ ನೋಡಪುದು ಸರಿಯಲ್ಲ. ನಮ್ಮ ರೈತರಿಗೆ ಏನು ಅನುಕೂಲವಾಗ ಬೇಕು ಆ ಕಡೆ ನಮ್ಮ ಸರ್ಕಾರ ಗಮನಹರಿಸಬೇಕು. ಮೊನ್ನೆ ಶುಗ್ಗನಹಳ್ಳಿ ಜಾತ್ರೆಯಲ್ಲಿ ಒಂದು ಜೊತೆ ಎತ್ತುಗಳನ್ನು ೨೬ ಸಾವಿರ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡು ಹೋಗಿದ್ದಾರೆ. ಒಳ್ಳೆಯ ಜಾತಿಯ ಎತ್ತುಗಳು ಸಿಕ್ಕುವುದು ಕಷ್ಟ ಇದೆ. ಈ ಯುಗಾದಿ ಬೇಸಿಗೆ ಕಾಲದಲ್ಲಿ ದನಗಳಿಗೆ ಖಾಯಿಲೆ ಬರುವಂಥಾದ್ದು ಜಾಸ್ತಿ ಇರುತ್ತದೆ. ಆದುದರಿಂದ, ಎತ್ತುಗಳ ಬಗ್ಗೆ ಹೆಚ್ಚಿನ ಗಮನ ಕೊಡಲು ಪ್ರತಿಯೊಂದು ಹಳ್ಳಿಗೂ ಕೂಡ ಡಾಕ್ಟರ್‌ಗಳು ವಿಸಿಟ್ ಮಾಡಿ ನೋಡಿಕೊಳ್ಳುವಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಸಕಾಲದಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಮಾನ್ಯ ಸದಸ್ಯರಾದಂಥ ಶ್ರೀ ರಾಮದೇವ್ ಅವರು ಸ್ಟ್ಯಾಂಡರ್ಡ್ ಮೆಡಿಸಿನ್ ಕೊಡುತ್ತಿಲ್ಲ ಎಂದು ಹೇಳಿದರು. ಈ ಮೆಡಿಸಿನ್ ತಯಾರಿಸತಕ್ಕವರು ಇಂಡಿಯನ್ ವೆಟರ್ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು. ಹಣವಂತರೂ, ಮಾರ್ಮಾಡಿಗಳು ತಯಾರು ಮಾಡತಕ್ಕಂಥ ಮೆಡಿಸಿನ್ ಅದಲ್ಲ. ಈ ಮೆಡಿಸಿನ್ ಇಂಡಿಯನ್ ವೆಟರ್ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ತಯಾರು ಮಾಡುತ್ತಾರೆ.

ಶ್ರೀ ಪಿ ರಾಮದೇವ್.—ಅದರಲ್ಲಿ ಅಡಲ್‌ಟ್ರೇಷನ್ ಆಗಿರುತ್ತದೆ. ಆದರೆ ಲೇಬಲ್ ಮಾ ಅದನ್ನೇ ಹಾಕಿರುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಅಂಥಾದ್ದು ಏನಾದರೂ ಇದ್ದರೆ, ಮಾನ್ಯ ಸದಸ್ಯರು ಅದನ್ನು ತೆಗೆದುಕೊಂಡು ಬಂದು ತೋರಿಸಿದರೆ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಪಿ. ರಾಮದೇವ್.—ಈಗಲೇ ಮೆಡಿಸಿನ್ ಸೀಜ್ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಕಾಲು, ಬಾಯಿ ಜ್ವರದ ಚುಚ್ಚು ಮದ್ದಿನಲ್ಲಿ ಸಬ್‌ಸ್ಟ್ಯಾಂಡರ್ಡ್ ಇದೆ ಎನ್ನುವುದು ಮಾನ್ಯ ರಾಮದೇವ್ ಅವರಿಗೆ ಗೊತ್ತಿದ್ದರೆ, ಅವರು ಅದನ್ನು ತಂದುಕೊಡಲಿ. ಅದನ್ನು ನಾವು ಲ್ಯಾಬೊರೇಟರಿಗೆ ಕಳುಹಿಸಿಕೊಟ್ಟು ಟೆಸ್ಟ್ ಮಾಡಿಸಿ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮೈಕೇಲ್ ಫರ್‌ನಾಂಡೀಸ್.—ಹಾಗಾದರೆ, ಬೇರೆ ಮದ್ದು ಸಬ್‌ಸ್ಟ್ಯಾಂಡರ್ಡ್ ಇರಬಹುದೇ?

ಶ್ರೀ ವೈ. ರಾಮಕೃಷ್ಣ.—ನಾವು ಮೆಡಿಸಿನ್ ಬೇರೆ ಕಡೆ ಎಲ್ಲೂ ತೆಗೆದುಕೊಂಡಿಲ್ಲ. ಇಂಡಿಯನ್ ಡ್ರಗ್ ಇನ್‌ಸ್ಟಿಟ್ಯೂಟ್‌ನಲ್ಲೇ ತೆಗೆದುಕೊಂಡಿರುವುದು ಎಂದು ಹೇಳಿದ್ದೇನೆ.

ಶ್ರೀ ಪಿ ರಾಮದೇವ್.—ಈಗ ತಮ್ಮ ಸ್ಟೋರ್‌ನಲ್ಲಿರತಕ್ಕ ಮೆಡಿಸಿನ್ ಸೀಜ್ ಮಾಡಿಸಿ, ಆಗ ನಾನು ಹೇಳಿದ್ದು ಸತ್ಯವೋ ಇಲ್ಲವೋ ಗೊತ್ತಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಆ ತರಹ ಸಬ್‌ಸ್ಟ್ಯಾಂಡರ್ಡ್ ಮೆಡಿಸಿನ್ ಇರತಕ್ಕದ್ದನ್ನು ಮಾನ್ಯ ಸದಸ್ಯರು ತಂದುಕೊಟ್ಟರೆ ಕಾನೂನು ಪ್ರಕಾರ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಮಾನ್ಯ ಸದಸ್ಯರು ಉಚಿತವಾಗಿ ಮೆಡಿಸಿನ್ ಕೊಡಬೇಕೆಂದು ಹೇಳಿದ್ದಾರೆ. ಅದು ನಮಗೂ ಸಂತೋಷದ ವಿಚಾರ ಆದರೆ ನಮಗೆ ಇರತಕ್ಕಂಥ ಒಂದು ಭಯ ಏನು ಎಂದರೆ, ಉಚಿತವಾಗಿ ಕೊಡಲಿಕ್ಕೆ ಹೋದರೆ ಎಲ್ಲಿ ಮಿಸ್‌ಯೂಸ್ ಆಗುತ್ತದೆಯೋ ಎನ್ನುವ ಭಯ ಇದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಿದರೆ ಮಿಸ್‌ಯೂಸ್ ಆಗಲಿಕ್ಕೆ ಅವಕಾಶ ಇರುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ದುಡಗಳು ಇಲ್ಲದೇ ಇರತಕ್ಕವರು ಮೆಡಿಸಿನ್ ತೆಗೆದುಕೊಂಡು ಹೋಗಿ ಇಟ್ಟುಕೊಳ್ಳಬಹುದು, ಅದೂ ಒಂದು ಭಯ ಇದೆ. ಆದರೂ ಕೂಡ ಇದು ಕೇವಲ ಎರಡು ಮೂರು ಲಕ್ಷ ರೂಪಾಯಿಗಳ ವಿಚಾರವಾದ್ದರಿಂದ, ಸರ್ಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತದೆ. ಇದು ರಾಷ್ಟ್ರೀಯ ಇರತಕ್ಕಂಥ ಯೋಜನೆ.

ಶ್ರೀ ಎ ಲಕ್ಷ್ಮೀಸಾಗರ್.—ಉಚಿತವಾಗಿ ಸಿಕ್ಕತಕ್ಕ ವಸ್ತುಗಳು ದುರುಪಯೋಗವಾಗಲಿಕ್ಕೆ ಸಾಧ್ಯವೇ?

ಶ್ರೀ ವೈ. ರಾಮಕೃಷ್ಣ.—ಇದರಲ್ಲಿ ಬೇರೆ ಸಂಬಂಧ ಇದೆ. ಇಲ್ಲಿ ಹಣದ ಪ್ರಶ್ನೆ ಮುಖ್ಯ ಅಲ್ಲ. ಸಾಕಷ್ಟು ವ್ಯಾಕ್ಸಿನ್ ತಯಾರಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಉಚಿತವಾಗಿ ಸಿಕ್ಕುತ್ತದೆಂದು ಯಾರಾದರೂ ತೆಗೆದುಕೊಂಡು ಹೋಗಿ ಸ್ಟಾಕ್ ಮಾಡಿಕೊಂಡರೆ ನಾವು ಏನು ಮಾಡುವೇಕು? ಇದನ್ನು ರಾಷ್ಟ್ರೀಯ ಯೋಜನೆಯಲ್ಲಿ ಅಳವಡಿಸಿ, ನಾಲ್ಕು ರೂಪಾಯಿ ಇದ್ದುದನ್ನು ಎರಡೂ ಚಿಲ್ಲರೆ ರೂಪಾಯಿ ಮಾಡಿದ್ದಾರೆ. ಒಂದು ವೇಳೆ ಉಚಿತವಾಗಿ ಕೊಡಲಿಕ್ಕೆ ಕೇಂದ್ರ ಸರ್ಕಾರದವರು ಪರ್‌ಮಿಷನ್ ಕೊಟ್ಟರೆ, ನಮ್ಮ ಸರ್ಕಾರ ಕೂಡ ಅದನ್ನು ಪರಿಶೀಲನೆ ಮಾಡಿ, ಖಂಡಿತವಾಗಿ ಅವರಿಗೆ ಉಚಿತವಾಗಿ ಕೊಡಲಿಕ್ಕೆ ಆಲೋಚನೆ ಮಾಡುತ್ತದೆ.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನಾನು ಮಾನ್ಯ ಮಂತ್ರಿಗಳ ಮುಂದೆ ಒಂದೆರಡು ಬೇಡಿಕೆಗಳನ್ನು ಇಡಲಿಕ್ಕೆ ಇಷ್ಟಪಡುತ್ತೇನೆ. ಮೊದಲು ಉಚಿತವಾಗಿ ಕೊಡುತ್ತೇವೆಂದು ಹೇಳಿದವರು ಮತ್ತೆ ಚಾರ್ಜ್ ಮಾಡಿದಂಥ ಉದ್ದೇಶವಾದರೂ ಏನು? ಅವರು ಕೆಲವು ದಿನ ಅದನ್ನು ಉಚಿತವಾಗಿ ಕೊಟ್ಟರು. ನಮ್ಮ ಲೀಡರ್ ಅವರ ಮನೆಯಲ್ಲಿಯೇ ನಾಲ್ಕು ದನಗಳು ಸತ್ತವು. ಅವರು ಇಲ್ಲೇ ಇದಾರೆ, ಬೇಕಾದರೆ ಕೇಳಿ. ಉಚಿತವಾಗಿ ಮೆಡಿಸಿನ್ ಕೊಡುತ್ತಾ ಇರಬೇಕಾದರೆ ದಿಢೀರನೆ ಚಾರ್ಜ್ ಮಾಡಿದ್ದು ಏತಕ್ಕೆ? ಇವೊತ್ತು ಕರ್ನಾಟಕದಲ್ಲಿ ಜನಗಳು ಎಷ್ಟು ಇದ್ದಾರೋ ದನಗಳು ಅಷ್ಟೇ ಇವೆ. ಜನಗಳ ಹಿತವನ್ನು ಮಾನ್ಯ ಆರೋಗ್ಯ ಮಂತ್ರಿಯವರು ನೋಡಿಕೊಳ್ಳುತ್ತಾರೆ. ಹಾಗೆಯೇ ದನಗಳ ಹಿತವನ್ನು ಮಾನ್ಯ ಪಶುಪಾಲನ ಮಂತ್ರಿಯವರು ನೋಡಿಕೊಳ್ಳುತ್ತಾರೆ. ದನಗಳಿಗೆ ಕಾಲು, ಬಾಯಿ ಜ್ವರ ಬಂತು ಎಂದರೆ ಅವು ಸತ್ತ ಹಾಗೆ. ಇವೊತ್ತು ಸರ್ಕಾರದಿಂದ ಸಾಲ ಕೊಟ್ಟು, ಎಮ್ಮೆ, ಹಸುಗಳನ್ನು ಕೊಡಿಸಿದ್ದೀರಿ. ಅವುಗಳಿಗೆ ಕಾಲು, ಬಾಯಿ ಜ್ವರ ಬಂದರೆ ಅವುಗಳ ಗತಿ ಏನಾಗಬೇಕು? ಆದ್ದರಿಂದ, ರೈತರನ್ನು ಸುಧಾರಿಸುವ ಪ್ರಚಾರ ಏನು ಹೇಳುತ್ತೀರಾ ಆ ಕಡೆ ಸರ್ಕಾರ ಹೆಚ್ಚಿನ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆ.ಡಿ.ಡಿ.ಸಿ.ಗೆ ಹಾಲು ಕೊಡತಕ್ಕ ದನಗಳಿಗೆ ಒಂದು ರೀತಿಯ ಚಾರ್ಜಸ್ ಇದೆ, ಅದೇ ಕೆ.ಡಿ.ಡಿ.ಸಿ.ಗೆ ಹಾಲು ಕೊಡದೇ ಇರತಕ್ಕಂಥ ದನಗಳಿಗೆ ಒಂದು ರೀತಿಯ ಚಾರ್ಜಸ್ ಇದೆ. ಹಾಲು ಕೊಡುವವರಿಗೆ ಒಂದು ರೂಪಾಯಿ, ಹಾಲು ಕೊಡದೇ ಇರುವವರಿಗೆ ಎರಡು ರೂಪಾಯಿ ಚಾರ್ಜಸ್ ಇದೆ. ಈ ವ್ಯತ್ಯಾಸ ಏತಕ್ಕೆ ? ದೇಶದಲ್ಲಿ ಅನ್ಯಾಯ ಮಾಡುತ್ತಿದ್ದೀರಿ. ಆದರೆ ಈ ದನಗಳಿಗೆ ಏತಕ್ಕೆ ಅನ್ಯಾಯ ಮಾಡುತ್ತೀರಿ? ಈಗ ಎರಡು ರೀತಿಯಲ್ಲಿ ಚಾರ್ಜಸ್ ಮಾಡತಕ್ಕದ್ದು ಇದೆಯೋ ಇಲ್ಲವೋ ಮಾನ್ಯ ಮಂತ್ರಿಗಳು ತಿಳಿಸಬೇಕು. ಈಗ ಔಷಧಿಯಲ್ಲಿಯೇ ಇಷ್ಟು ವ್ಯತ್ಯಾಸ ಮಾಡುವವರು ಇನ್ನು ಊಟ ತಿಂಡಿಯಲ್ಲಿ ಎಷ್ಟು ವ್ಯತ್ಯಾಸ ಮಾಡಬಹುದು! ಇನ್ನು ಇತ್ತೀಚೆಗೆ ರೋಗ ಕಡಿಮೆಯಾಗಿದೆ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳಿಗೆ ಯಾವ ಡಾಕ್ಟರ್ ಹೇಳಿದರು ಯಾವ ವಾರ್ತಾ ಇಲಾಖೆಯವರು ನಿಮಗೆ ಇದನ್ನು ಹೇಳಿದರು? ಕಾಲು

ಬಾಯಿ ರೋಗ ಪ್ರತಿ ವರ್ಷ ಎಷ್ಟು ಇತ್ತೋ ಅಷ್ಟೇ ರೋಗ ಈ ವರ್ಷವೂ ಕರ್ನಾಟಕದಲ್ಲಿದೆ. ನಿಮಗೆ ಯಾರೋ ತಪ್ಪು ಹೇಳಿದ್ದಾರೆ. ನೀವು ಅವರು ಹೇಳುವುದನ್ನೆಲ್ಲಾ ಕೇಳಲಿಕ್ಕೆ ಹೋಗಬೇಡಿ. ನೀವು ಸ್ವಂತ ಹೋಗಿ ಕಾಲು–ಬಾಯಿ ರೋಗ ಇದೆಯೇ ಇಲ್ಲವೇ ಎನ್ನುವುದನ್ನು ವಿಚಾರಿಸಿ ನೋಡಿ, ಅಧಿಕಾರಿಗಳು ಹೇಳುವುದನ್ನು ನಂಬಬೇಡಿ. ಇವೊತ್ತು ಬಡವರ ದನಗಳು ಸಾಯುತ್ತಿವೆ. ಸಾಹುಕಾರರ ದನಗಳು ಸತ್ತರೆ ಎಲ್ಲಾದರೂ ಹೋಗಲಿ ಎಂದು ಹೇಳಬಹುದು. ಇವೊತ್ತು ತಾವು ಬಡವರನ್ನಂತೂ ಸಾಹುಕಾರರನ್ನಾಗಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಸಾಹುಕಾರರನ್ನು ಬಡವರನ್ನು ಮಾಡುವುದು ನಿಮಗೆ ಬಹಳ ಸುಲಭ. ತಾವು ನೊಂದ ಜನಗಳಿಗೆ ತಿಳಿಯದಂಥ ವಿಚಾರವನ್ನು ನೀವು ಪ್ರಚಾರ ಮಾಡಲಿಕ್ಕೆ ಹೊಗಬೇಡಿ. ದನಗಳನ್ನು ಕಾಪಾಡುವಂಥ ಜವಾಬ್ದಾರಿ ತಮ್ಮದು. ಆದ್ದರಿಂದ ಕಾಲು ಭಾಗ, ಅರ್ಧ ಭಾಗ, ಮುಕ್ಕಾಲು ಭಾಗ ಎಂದು ಹೇಳುವುದನ್ನು ಬಿಟ್ಟು ಉಚಿತವಾಗಿ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ದೊಡ್ಡ ರೋಗ, ಚಪ್ಪೆ ರೋಗ, ಅನ್ಯ ರೋಗಗಳಿಗೆ ಉಚಿತವಾಗಿ ಔಷಧ ಕೊಡುತ್ತಿದ್ದೀರಿ. ಈ ಕಾಲು–ಬಾಯಿ ಜ್ವರದ ಚುಚ್ಚು ಮದ್ದಿಗೆ ಏತಕ್ಕೆ ನೀವು ಚಾರ್ಜ್ ಮಾಡುತ್ತಿರಾ? ನೀವು ಖರ್ಚು ಮಾಡತಕ್ಕದ್ದು ನೋಡಿದರೆ ಕೋಟಿ, ಕೋಟಿಗಟ್ಟಲೆ ಎಂದು ಹೇಳುತ್ತೀರಿ. ಈ ಲಕ್ಷ ರೂಪಾಯಿಗಳಿಗೆ ಏತಕ್ಕೆ ಹೆದರುತ್ತೀರಿ? ದಯವಿಟ್ಟು ಕಾಲು ಬಾಯಿ ಜ್ವರದ ಚುಚ್ಚ ಮದ್ದನ್ನು ಉಚಿತವಾಗಿ ಕೊಟ್ಟು ಬಡವರನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮಂತ್ರಿಯವರು ಪುಗಸಟ್ಟೆ ಕೊಡುತ್ತೇವೆಂದು ಹಿಂದಿನ ಸಾರಿ ಹೇಳಿದ್ದು, ಆದು ಈ ಸಾರಿ ಹೇಳಿಕೆಯಲ್ಲಿ ಇಲ್ಲ. ಬೆರಕೆ ಔಷಧಿ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಇದ್ದರೆ, ಬೆರಕೆ ಔಷಧಿಯಿಂದ ಕಾಯಿಲೆ ನಿಲ್ಲುವುದಕ್ಕೆ ಬದಲಾಗಿ ಜಾಸ್ತಿಯಾಗುತ್ತದೆ. ಜನಗಳಿಗೆ ಕಾಲರಾ ಚುಚ್ಚು ಮದ್ದು ಇನ್ನಿತರ ಚುಚ್ಚು ಮದ್ದುಗಳನ್ನು ಮುಫತ್ತಾಗಿ ಕೊಡುವ ಹಾಗೆ, ದನಗಳಿಗೆ ಪುಗ್‌ಸಟ್ಟೆ ಚುಚ್ಚುಮದ್ದುಗಳನ್ನು ಕೇಂದ್ರ ಸರ್ಕಾರದ ವತಿಯಿಂದಾಗಲೀ, ರಾಜ್ಯಸರ್ಕಾರದ ವತಿಯಿಂದಲಾಗಲೀ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನವೆಂಬರ್‌ನಿಂದ ಮಾರ್ಚ್‌ವರೆಗೆ ಫ್ಲಡ್ ಸೀಜನ್ ಆದುದೇಲೆ ಹಾಲು ಕಡಿಮೆಯಾಗಿ ಗ್ರಾಹಕರಿಗೆ ಹಾಲು ಕಡಿಮೆ ಸರಬರಾಜು ಮಾಡುವಂತಹ ಪರಿಸ್ಥಿತಿ ಬಂತು. ಒಂದು ಸಾರಿ ಪಶುಗಳು ಖಾಯಿಲೆ ಬಿದ್ದರೆ, ಹಾಲು ಕಡಿಮೆಯಾಗುತ್ತದೆ. ಇಂಥ ಒಂದು ಗಂಭೀರವಾದ ಪರಿಸ್ಥಿತಿ ಇರುವಾಗ ಉಚಿತವಾಗಿ ಲಸಿಕೆಗಳನ್ನು ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ಎಂದು ನಾನು ಕೇಳುತ್ತೇನೆ.

(ii) *re.—Theft of precious treasures namely Bronze Idols from the Venkatappa Art Gallery.*

SRI M. C. NANAIAH.—Sir, I call the attention of the Minister of State for Information and Youth Services regarding theft of precious treasures namely Bronze Idols from the Venkatappa Art Gallery.

SRI H. GANGADHARA GOWDA (Minister of State for Information and Youth Services).—

Sir, I wish to make the following statement:

ಬೆಂಗಳೂರು ಸರ್ಕಾರಿ ವಸ್ತು ಸಂಗ್ರಹಾಲಯದ ಭಾಗವಾದ ವೆಂಕಟಪ್ಪ ಕಲಾ ಶಾಲಾ ಸಂಗ್ರಹದಿಂದ ಯಾವುದೇ ಪ್ರತಿಮೆಗಳು ಕಳುವಾದ ಪ್ರಕರಣಗಳು ಇಲ್ಲ. ದಿನಾಂಕ ೯–೯–೧೯೭೯ರ ಸಂಡೆ ಸ್ಟ್ಯಾಂಡರ್ಡ್ ವೃತ್ತ ಪತ್ರಿಕೆಯಲ್ಲಿ ಪ್ರಕಟವಾದ "Heritage open to pillage" ಎಂಬ ಲೇಖನದಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯದ ಮೇಲೆ ಮಾಡಲಾದ ಕೆಲವು ಆಪಾದನೆಗಳ ಆಧಾರದ ಮೇಲೆ ಆಗಿನ ವಿದ್ಯಾ ಮಂತ್ರಿಗಳು ಆಪಾದನೆಗಳ ಪರಿಶೋಧನೆಯನ್ನು ಸಿ.ಓ.ಡಿ. ಯವರಿಗೆ ವಹಿಸಲು ಆಜ್ಞಾಪಿಸಿದ್ದರು. ಅಂತೆಯೇ ವಿಚಾರಣೆಯನ್ನು ವಿಶೇಷ ಐ.ಜಿ.ಪಿ. (ತರಬೇತಿ ಮತ್ತು ಸಿ.ಐ.ಡಿ.)